**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ</u>**

**ನ್ಯಾಯಿಕ ದಂಡಧಿಕಾರಿಗಳ ನ್ಯಾಯಾಲಯ, ಕುಷ್ಟಗಿ**

**ಸಿ ಸಿ ಸಂಖ್ಯೆಃ 1102/2022 ಪಿಡಬ್ಲ್ಯೂ : 1**

**ದಿನಾಂಕಃ 19.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಪಿರ್ಯಾದಿ ಪರ ಶ್ರೀ ಎ. ಎ.ಪಿ. ವಕೀಲರಿಂದಃ</u>**

1. ನಾನು ನನ್ನ ಪ್ರಮಾಣೀಕೃತ ಹೇಳಿಕೆಯ ಬಾಬ್ತು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ, ಅದರಲ್ಲಿ ನನ್ನ ಸಹಿ ಇರುತ್ತದೆ.

2. ಸದರಿ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯಾಗಿ ಪರಿಗಣಿಸಲು ಈ ದಿನ ನಾನು ಮೆಮೊ ಸಲ್ಲಿಸುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ.
3. ದಿನಾಂಕ 29.05.2024 ರ ಎಕ್ಸಿಸ್ ಬ್ಯಾಂಕ್ ಲಿಮಿಟೆಡ್ ಚೆಕ್ ಅನ್ನು ನಿಪಿ 1 ಎಂದು, ಅದರಲ್ಲಿನ ಸಹಿಯನ್ನು ಆರೋಪಿಯ ಸಹಿ ಎಂದು ಸಾಕ್ಷಿಯು ನೋಡಿ ಗುರುತಿಸಿದ್ದು, ಈ ಹಂತದಲ್ಲಿ ಆರೋಪಿ ಪರ ವಕೀಲರು ಸದರಿ ಸಹಿಯನ್ನು ತಕರಾರಿಗೆ ಒಳಪಟ್ಟು ಗುರುತಿಸಲು ವಿನಂತಿಸಿದ ಮೇರೆಗೆ ನಿಪಿ-1 ಎ ಎಂದು ಗುರುತಿಸಲಾಯಿತು. ದಿನಾಂಕ 30.05.2024 ರ ಬ್ಯಾಂಕ ಹಿಂಬರಹವನ್ನು ನಿಪಿ 2 ಎಂದು, ದಿನಾಂಕ 11.06.2024 ರ ಲೀಗಲ್ ನೊಟೀಸ ಪ್ರತಿಯನ್ನು ನಿಪಿ-3 ಎಂದು, ಅಂಚೆ ರಶೀದಿಯನ್ನು ನಿಪಿ-4 ಎಂದು, ಪೋಸ್ಟಲ್? ಟ್ರ್ಯಾಕ್ ಕನಸೈನಮೆಂಟನ್ನು ನಿಪಿ-5 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಃ ಇಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀಸವಾಲು ಮಾಡಲು ಅರ್ಜಿ ಸಲ್ಲಿಸಿ ಸಮಯಾವಕಾಶ ಕೇಳಿದ ಕಾರಣ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**